**ದಿನಾಂಕಃ 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಎಂ ಎ ವಕೀಲರಿಂದಃ**

1. ನಾನು ಬಿಇ ಮೆಕಾನಿಕಲ್ ಇಂಜಿನೀಯರಿಂಗ ವಿದ್ಯಾಭ್ಯಾಸ ಮಾಡಿರುತ್ತೇನೆ. ನೀವು ಬೆಂಗಳೂರಿನ ಪ್ರೆಸ್ಟೀಜ್ ಗ್ರುಪ್ಸನಲ್ಲಿ ಕೆಲಸ ಮಾಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾದಗಿರಿಯಲ್ಲಿ ಕೌನ್ಸಲರ್ ಆಗಿದ್ರಿ ಎಂದರೆ ಸರಿ. ನಿಮ್ಮ ಕೌನ್ಸಲರ್ ಅವಧಿ 2001 ರಿಂದ 2005 ರ ವರೆಗೆ ಇತ್ತು ಎಂದರೆ ಸರಿ. 2003-04 ರಲ್ಲಿ ನೀವು ಸಿಎಂಸಿಯ ರೆವೆನ್ಯೂ ಖಾತೆಯಲ್ಲಿ ಬದಲಾವಣೆ ಮಾಡಿದ್ದೀರಿ ಎಂದು ನಿಮ್ಮನ್ನು ಡಿಸಿ ರವರು ಅನರ್ಹಗೊಳಿಸಿದ್ದರು ಎಂದರೆ ಸರಿಯಲ್ಲ. ನಿಮ್ಮನ್ನು ಅನರ್ಹಗೊಳಿಸಿದ್ದರು ಸಹ ನೀವು ಇಲ್ಲ ಎಂದು ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ. ಹಾಗಾದರೆ ಯಾವ ಕಾರಣಕ್ಕಾಗಿ ನೀವು ಅನರ್ಹಗೊಂಡಿದ್ದೀರಿ ಎಂದರೆ ಸಾಕ್ಷಿ ಟೆಂಡರ್ ಕರೆಯುವ ವಿಚಾರಕ್ಕಾಗಿ ಎಂದು ನುಡಿಯುತ್ತಾರೆ.

2. 2002 ರಲ್ಲಿ ನಿಮ್ಮ ಮೊದಲ ಮದುವೆಯಾಗಿತ್ತು ಎಂದರೆ ಸರಿ. ನಿಮ್ಮ ಹೆಂಡತಿ ಸರಕಾರಿ ಶಿಕ್ಷಕರು ಎಂದರೆ ಸಾಕ್ಷಿ ಮದುವೆ ಸಮಯದಲ್ಲಿ ಶಿಕ್ಷಕರಾಗಿರಲಿಲ್ಲ ನಂತರ ಶಿಕ್ಷಕ ಹುದ್ದೆಗೆ ಸೇರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನೀವು 2 ನೇ ಮದುವೆ ಮಾಡಿಕೊಂಡಿದ್ದೀರಿ ಎಂದರೆ ಸರಿ. 2006-07 ರಿಂದ ನೀವು ಮನೆಯಿಂದ ಬೇರೆಯಾಗಿದ್ದೀರಿ ಎಂದರೆ ಸರಿಯಲ್ಲ.

3. ಸರ್ವೇ ನಂ.369/2 ನ್ನು ನಿಮ್ಮ ತಮ್ಮ ಎನ್.ಎ. ಪ್ಲಾಟಗಳನ್ನು ಮಾಡಿ ಮಾರಾಟ ಮಾಡಿದ್ದರು ಎಂದರೆ ಸರಿ. ಆ ಸರ್ವೇ ನಂಬರನಲ್ಲಿ ಎಷ್ಟು ಪ್ಲಾಟಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ 10-15 ಪ್ಲಾಟಗಳು ಇರಬಹುದು ಎಂದು ನುಡಿಯುತ್ತಾರೆ. ಆ 10-15 ಪ್ಲಾಟಗಳನ್ನು ಖರೀದಿಸಿದವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದೇನೆ ಎಂದು ನುಡಿಯುತ್ತಾರೆ. ಹಾಗಾದರೆ ಅವರುಗಳು ಎಷ್ಟನೇ ಪ್ರತಿವಾದಿಗಳು ಆಗಿದ್ದಾರೆ ಹೇಳುತ್ತೀರಾ ಎಂದರೆ ಸಾಕ್ಷಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಅವರ ಹೆಸರುಗಳು ಹೇಳುತ್ತೀರಾ ಎಂದರೆ ಸಾಕ್ಷಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಮ್ಮ ಪ್ಲಾಟಗಳನ್ನು ಮಾರಾಟ ಮಾಡಿದ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಆದರೂ ನೀವು ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ.

4. ನಿಮ್ಮ ತಮ್ಮ ಸರ್ವೇ ನಂ.66 ನ್ನು ಸಹ ಮಾರಾಟ ಮಾಡಿದ್ದು ಖರೀದಿಸಿದ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ

ನಿಮ್ಮ ತಮ್ಮ ಸರ್ವೇ ನಂ.11/2, 11/1 ರಲ್ಲಿಯೂ ಕೂಡ ಎನ್.ಎ ಪ್ಲಾಟಗಳನ್ನು ಮಾಡಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಎಷ್ಟು ಜನಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಜಮೀನುಗಳಲ್ಲಿ ಎಷ್ಟು ಪ್ಲಾಟಗಳನ್ನು ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಮ್ಮ ಸರ್ವೇ ನಂ.11/2, 11/1 ರ ಪ್ಲಾಟಗಳನ್ನು ಮಾರಾಟ ಮಾಡಿದ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಹಾಗಾದರೆ ಅವರುಗಳು ಎಷ್ಟನೇ ಪ್ರತಿವಾದಿಗಳು ಆಗಿದ್ದಾರೆ ಹೇಳುತ್ತೀರಾ ಎಂದರೆ ಸಾಕ್ಷಿ 3 ರಿಂದ ಉಳಿದ ಪ್ರತಿವಾದಿಗಳ ವರೆಗೆ ಇರಬಹುದು ಎಂದು ನುಡಿಯುತ್ತಾರೆ. ಆ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಆದರೂ ನೀವು ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ.

5. ಸರ್ವೇ ನಂ.258/2 ಕಟ್ಲಟ್ಟೂರ ಜಮೀನನ್ನು ಸಹ ನಿಮ್ಮ ತಮ್ಮ ಮಾರಾಟ ಮಾಡಿದ್ದಾರೆ ಎಂದರೆ ಸರಿ. ವೆಂಕಟೇಶ ಎನ್ನುವವರಿಗೆ ಆ ಜಮೀನನ್ನು ಮಾರಾಟ ಮಾಡಿದ್ದು ನೀವು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಎಷ್ಟನೇ ಪ್ರತಿವಾದಿ ಎಂದರೆ ಸಾಕ್ಷಿ ಅವರು ಶಿವಾರೆಡ್ಡಿ ಆಗಿದ್ದು 62 ನೇ ಪ್ರತಿವಾದಿ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ.

6. ಸರ್ವೇ ನಂ 24/2 ವಿಸ್ತೀರ್ಣ 01 ಎಕರೆ 15 ಗುಂಟೆ ರಾಂಪೂರ ಈ ಜಮೀನನ್ನು ಸಹ ನಿಮ್ಮ ತಮ್ಮ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಯಾರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅಲ್ಲಿಯ ಸ್ಥಳೀಯರಿಗೆ ಮಾರಾಟ ಮಾಡಿದ್ದಾರೆ ಆದರೆ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರನ್ನು ನೀವು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ.

7. ನಿಮ್ಮ ತಮ್ಮ ಮಾರಾಟ ಮಾಡಿರುವ ಸರ್ವೇ ನಂ.672, 250/2, 369/2, 258/2, 96/2, 66, 11/1, 11/2, 82/1, 24/2 ಇವುಗಳನ್ನು ಖರೀದಿಸಿರುವ ವ್ಯಕ್ತಿಗಳನ್ನು ನೀವು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆ ಕ್ರಯ ಪತ್ರಗಳನ್ನು ರದ್ದುಗೊಳಿಸಲು ನೀವು ಕೋರಿಕೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸುಳ್ಳು ನುಡಿದಿದ್ದೀರಿ ಎಂದರೆ ಸರಿಯಲ್ಲ.

8. ಸರ್ವೇ ನಂ.672 ನ್ನು ಖರೀದಿಸಿದ ವ್ಯಕ್ತಿಗಳನ್ನು ಮಾತ್ರ ನೀವು ಪಕ್ಷಗಾರರನ್ನಾಗಿ ಮಾಡಿದ್ದೀರಿ ಮತ್ತು ಉಳಿದ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

9. ನಿಮ್ಮ ತಮ್ಮ ಅಂದರೆ 1 ನೇ ಪ್ರತಿವಾದಿ ಎಸ್ ಬಿ ಹೆಚ್ ಬ್ರಾಂಚ್ ಯಾದಗಿರಿ ಯಿಂದ ರೂ.23,50,000/- ಸಾಲವನ್ನು ಪಡೆದು ಚೌಧರಿ ಇಂಡಸ್ಟ್ರೀಸ ಎಂದು ಕಂಪನಿ ಮಾಡಿದ್ದಾರೆ ಎಂದರೆ ಸಾಕ್ಷಿ ಅವರು ಸಾಲ ಮಾಡಿದ್ದಾರೆ ಆದರೆ ನಾನು ಅರ್ನೆಸ್ಟ ಡೆಪಾಸಿಟ್ ರೂ.1,50,000/- ವನ್ನು ನಾನೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಹಾಗಾದರೆ ಆ ವಿಚಾರವಾಗಿ ನೀವು ರಸೀದಿಯನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಹಣವನ್ನು ನಗದು ಆಗಿ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ನೀವೆ ಲೋನ್ ಮಾಡಿಸಿದ್ದೀರಿ ಮತ್ತು ಅರ್ನೆಸ್ಟ ಮನಿ ಡೆಪಾಸಿಟ್ ಮಾಡಿದ್ದೀರಿ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ.

10. ನಿಪಿ-28 ರಿಂದ 44 ರ ವರೆಗಿನ ಖರೀದಿ ಪತ್ರಗಳಲ್ಲಿ 1 ಮತ್ತು 2 ನೇ ಪ್ರತಿವಾದಿಗಳೆ ಕ್ರಯದ ಮೌಲ್ಯ ಕೊಟ್ಟಿದ್ದಾರೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಿಪಿ-28 ರಿಂದ 44 ರ ಖರಿದಿ ಪತ್ರಗಳಲ್ಲಿ 1 ಮತ್ತು 2 ನೇ ಪ್ರತಿವಾದಿಗಳೆ ತಮ್ಮ ಸ್ವಂತ ಹಣವನ್ನು ಕೊಟ್ಟು ಖರೀದಿ ಮಾಡಿದ್ದರು ಸಹ ನೀವು ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ.

11. ನೀವು ಮತ್ತು ನಿಮ್ಮ ತಮ್ಮಂದಿರು ಯಾವತ್ತೂ ಸಹ ಒಟ್ಟಿಗೆ ಜಂಟಿ ಕುಟುಂಬದಲ್ಲಿ ವಾಸ ಮಾಡಿಲ್ಲ ಎಂದರೆ ಸರಿಯಲ್ಲ. ನೀವೆ ನಿಮ್ಮ ವ್ಯಾಪಾರದಲ್ಲಿ ನಷ್ಟ ಮಾಡಿಕೊಂಡು ನಿಮ್ಮ ತಮ್ಮಂದಿರಿಂದ ಹಣ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ದಾವಾ ಪತ್ರದಲ್ಲಿ ನೀವು ಮತ್ತು ನಿಮ್ಮ ತಮ್ಮಂದಿರು ಜಂಟಿಯಾಗಿ ವಾಸವಿದ್ದು ಜಂಟಿಯಾಗಿ ವ್ಯವಹಾರ ಮಾಡುತ್ತಿದ್ದೀರಿ ಎಂದು ತೋರಿಸಲು ಜಂಟಿ ವ್ಯವಹಾರ ಕರಾರು ಪತ್ರ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನೀವು ಆ ರೀತಿ ಯಾವುದೇ ಜಂಟಿ ವ್ಯವಹಾರ ಕರಾರು ಪತ್ರ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ಸ್ವಂತ ದುಡಿದ ಹಣದಿಂದ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಮತ್ತು ನಿಮಗೆ ಅವರ ಆಸ್ತಿಗಳಲ್ಲಿ ಯಾವುದೆ ಹಕ್ಕು ಮತ್ತು ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ನೀವು ಕೇಳಿದ ವ್ಯವಹಾರಕ್ಕಾಗಿ ಹಣ ಕೊಟ್ಟಿಲ್ಲ ಎಂದು ಈ ಸುಳ್ಳು ದಾವೆಯನ್ನು ಅವರ ವಿರುದ್ಧ ಹಾಕಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಯಾವುವು ಸಹ ಜಂಟಿ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 8 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಕೆ ವಿ ಜಿ ವಕೀಲರಿಂದಃ**

1. ದಾವಾ ಪತ್ರದಲ್ಲಿ ನೀವು ನಮೂದು ಮಾಡಿರುವ ಸರ್ವೇ ನಂಬರಗಳು ಮಾತ್ರ ದಾವಾ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಒಂದು ಆಸ್ತಿಯನ್ನು ಬಿಟ್ಟು ಉಳಿದ ಆಸ್ತಿಗಳು ಯಾದಗಿರಿಯಲ್ಲಿಯೆ ಇರುತ್ತವೆ ಎಂದರೆ ಸರಿ.

2. ನನ್ನ ತಂದೆಗೆ 10 ಜನ ಮಕ್ಕಳು. ಎಲ್ಲಾ ದಾವಾ ಆಸ್ತಿಗಳಲ್ಲಿ ಎನ್.ಎ. ಪ್ಲಾಟಗಳನ್ನು ಮಾಡಿ ಮಾರಾಟ ಮಾಡಲಾಗಿದೆಯೇ ಎಂದರೆ ಸಾಕ್ಷಿ ಎಲ್ಲಾ ದಾವಾ ಆಸ್ತಿಗಳಲ್ಲಿಯೂ ಎನ್.ಎ. ಪ್ಲಾಟಗಳನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 8 ಮತ್ತು 9 ನೇ ಪ್ರತಿವಾದಿಗಳು ವೈದ್ಯ ವೃತ್ತಿ ಮಾಡುತ್ತಿದ್ದಾರೆ. 8 ಮತ್ತು 9 ನೇ ಪ್ರತಿವಾದಿಗಳು ಯಾವಾಗ ಪ್ಲಾಟಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಪ್ಲಾಟಗಳನ್ನು ಯಾವ ಸರ್ವೇ ನಂಬರನಲ್ಲಿ ಖರೀದಿ ಮಾಡಿದ್ದಾರೆ ಗೊತ್ತಿದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಪತ್ರದಲ್ಲಿ ಆ ಸರ್ವೇ ನಂಬರನ್ನು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ನಮೂದು ಮಾಡಿದ್ದೇನೆ ಎಂದು ನುಡಿಯುತ್ತಾರೆ. 8 ಮತ್ತು 9 ನೇ ಪ್ರತಿವಾದಿಗಳು ನಿಮ್ಮ ತಮ್ಮನ ಕಡೆಯಿಂದ ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 8 ಮತ್ತು 9 ನೇ ಪ್ರತಿವಾದಿಗಳು 1 ಮತ್ತು 2 ನೇ ಪ್ರತಿವಾದಿಗಳಿಂದ ಪ್ಲಾಟಗಳನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ.

3. ನೀವು ಪ್ರತಿವಾದಿಗಳನ್ನಾಗಿ ಮಾಡಿರುವ ವ್ಯಕ್ತಿಗಳು ಖರೀದಿದಾರರೇ ಎಂದರೆ ಸಾಕ್ಷಿ ಹೌದು ಪ್ಲಾಟ ಖರೀದಿದಾರರು ಎಂದು ನುಡಿಯುತ್ತಾರೆ. ಖರೀದಿದಾರರು ಇನ್ನೂ ಬೇರೆ ಜನ ಇದ್ದಾರೆಯೇ ಅಥವಾ ಈ ದಾವೆಯಲ್ಲಿ ತೋರಿಸಿದ ಪ್ರತಿವಾದಿಗಳು ಮಾತ್ರ ಖರೀದಿದಾರರೆ ಎಂದರೆ ಸಾಕ್ಷಿ ಪ್ರತಿವಾದಿಗಳೆ ಖರೀದಿದಾರರು ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೇಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಅಂತ ಒಪ್ಪಿಕೊಂಡಿರುತ್ತಾರೆ)

**ಪ್ರಧಾನ ಹಿರಿಯ ಸಿವಿಲ್ ಮತ್ತು ಸಿಜೆಎಂ**
**ನ್ಯಾಯಾಧೀಶರು, ರಾಯಚೂರು.**